ಎ) ರಾಜ್ಯ ಸರ್ಕಾರದವರು ರೈಲ್ವೆ ಇಲಾಖೆಗೆ ಹಣವನ್ನು ಕಾಲಕ್ಕೆ ಸರಿಯಾಗಿ ಪಾವತಿ ಮಾಡದೆ ಇರುವುದರಿಂದ ರೈಲ್ವೆ ಜಾಗಗಳಲ್ಲಿ ಬರುವ ಸಿ.ಡಿ.ವರ್ಕ್ಸ್ ಕಾಮಗಾರಿಗಳು ಅಪೂರ್ಣಗೊಂಡಿರುವುದು ನಿಜವೇ; ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು) :

ಅ) ಮೂರು

ಆ) ಯಾವುದನ್ನೂ ಪೂರ್ಣಗೊಳಿಸಿರುವುದಿಲ್ಲ.

ಇ) ಮೂರು.

ಈ) ರೂ 149.62 ಲಕ್ಷಗಳು.

ಉ) ಎಲ್ಲವನ್ನೂ ಪಾವತಿಸಲಾಗಿದೆ. ಬಾಕಿಯಿರುವುದಿಲ್ಲ.

ಊ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಎ) ಇದು ನಿಜವಲ್ಲ.

ಹೇಮಾವತಿ ಯೋಜನೆಯ ಬಾಗೂರು ನವಿಲೆ ಸುರಂಗದಿಂದ 123 ಕಿ.ಮಿ.ವರೆಗೆ ಸಿ.ಡಿ.ವರ್ಕ್ಸ್.

661 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರದ್) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹೇಮಾವತಿ ಎಡದಂಡೆ ನಾಲೆ ಯೋಜನೆಯಲ್ಲಿ ಬರುವ (ತುಮಕೂರು ಉಪ ನಾಲೆಯಲ್ಲಿ) ಬಾಗೂರು-ನವಿಲೆ ಸುರಂಗ ಮಾರ್ಗದಿಂದ 123 ಕಿ.ಮಿ.ರ ವರೆಗೆ ಎಷ್ಟು ಸಿ.ಡಿ. ಕಾಮಗಾರಿಗಳು ಇರುತ್ತವೆ (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು)

ಆ) ಈ ಪೈಕಿ ಎಷ್ಟು ಸಿ.ಡಿ. ವರ್ಕ್ಸ್‌ಗಳು ಪೂರ್ಣಗೊಂಡಿವೆ (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು);

ಇ) ಈ ಪೈಕಿ ಅಪೂರ್ಣವಾಗಿರುವ ಸಿ.ಡಿ. ವರ್ಕ್ಸ್‌ಗಳೆಷ್ಟು ;

ಈ) ಕೈಗೆತ್ತಿಕೊಳ್ಳದೆ ಬಾಕಿ ಇರುವ ಸಿ.ಡಿ. ವರ್ಕ್ಸ್‌ಗಳೆಷ್ಟು; (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು)

ಉ) ಸಿ.ಡಿ. ವರ್ಕ್ಸ್‌ಗಳಿಗೆ ಇದುವರೆಗೆ ವಿಚ್ರ್ಯು ಮಾಡಿರುವ ಹಣವೆಷ್ಟು;

ಊ) ಬಾಕಿ ಇರುವ ಸಿ ಡಿ ವರ್ಕ್ಸ್‌ಗಳನ್ನು ಪೂರ್ಣಗೊಳಿಸಲು ಅಗತ್ಯವಿರುವ ಹಣವೆಷ್ಟು;

ಎ) ಸಿ ಡಿ ವರ್ಕ್ಸ್‌ಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲು ಬೇಕಾಗಿರುವ ಕಾಲಾವಕಾಶ ಎಷ್ಟು;

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು) :

ಅ) 253 ಸಿ.ಡಿ. ಕಾಮಗಾರಿಗಳು ಇರುತ್ತದೆ. ಚನ್ನರಾಯಪಟ್ಟಣ 13, ತಿಪಟೂರು 90, ತುರುವೇಕೆರೆ 28, ಗುಬ್ಬಿ 110, ತುಮಕೂರು 12.

ಆ) 66 ಸಿ.ಡಿ. ಕಾಮಗಾರಿಗಳು ಪೂರ್ಣಗೊಂಡಿವೆ. ಚನ್ನರಾಯಪಟ್ಟಣ 4, ತಿಪಟೂರು 31, ತುರುವೇಕೆರೆ 7, ಗುಬ್ಬಿ 24.

ಇ) 117 ಸಿ.ಡಿ. ಕಾಮಗಾರಿಗಳು

ಈ) 70 ಸಿ.ಡಿ. ಕಾಮಗಾರಿಗಳು,

ಚನ್ನರಾಯಪಟ್ಟಣ 1, ತಿಪಟೂರು 15, ಗುಬ್ಬಿ 42, ತುಮಕೂರು 12.

ಉ) ರೂ 935.17 ಲಕ್ಷಗಳು

ಊ) ರೂ 2801.01 ಲಕ್ಷಗಳು

ಎ) ಸುಮಾರು ಒಂದು ವರ್ಷ.

ರಾಜ್ಯದ ಗಡಿ ಅಭಿವೃದ್ಧಿ ಯೋಜನೆ

679 - ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್(ಸಂಕೇಶ್ವರ) : ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ರಾಜ್ಯದ ಎಷ್ಟು ಜಿಲ್ಲೆಗಳು ಗಡಿ ಅಭಿವೃದ್ಧಿಯಲ್ಲಿ ಬರುತ್ತವೆ?

ಆ) ಈ ಗಡಿ ಅಭಿವೃದ್ಧಿಯ ಹಣವನ್ನು ರಾಜ್ಯದ ಗಡಿಯಿಂದ ಎಷ್ಟು ಕಿ.ಮಿ.ವರೆಗೆ ಉಪಯೋಗಿಸಲಾಗುತ್ತಿದೆ?

ಇ) ಈ ಬಗ್ಗೆ ಕೊಡುವ ಹಣ ವಿಧಾನ ಸಭಾ ಸದಸ್ಯರಿಗೆ ಮಾತ್ರವೇ ಅಥವಾ ವಿಧಾನ ಪರಿಷತ್ ಸದಸ್ಯರು ಕೆಲಸ ತೆಗೆದುಕೊಳ್ಳಬಹುದೇ?

ಈ) ಬೆಳಗಾವಿ ಗಡಿ ಅಭಿವೃದ್ಧಿ ಕೆಲಸಕ್ಕಾಗಿ 1989 ರಿಂದ ಇಲ್ಲಿಯವರೆಗೆ ಯಾವ ಯಾವ ಶಾಸಕ ಕ್ಷೇತ್ರಕ್ಕೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಶ್ರೀ ಶ್ರೀರಂಗದೇವರಾಯಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು.):

ಅ) ರಾಜ್ಯದಲ್ಲಿ 15 ಜಿಲ್ಲೆಗಳು ಗಡಿ ಅಭಿವೃದ್ಧಿಯಲ್ಲಿ ಬರುತ್ತವೆ.

ಆ) ಗಡಿ ಅಭಿವೃದ್ಧಿಯ ಯೋಜನೆಯಲ್ಲಿ ತಾಲ್ಲೂಕನ್ನು ಒಂದು ಘಟಕವಾಗಿ ಪರಿಗಣಿಸಿ ಗಡಿಯಿಂದ 10 ಕಿ.ಮಿ. ಒಳಗೆ ಬರುವ ಹಳ್ಳಿಗಳಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಆಧ್ಯತೆ ನೀಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಮಾರ್ಗಸೂಚನೆ ನೀಡಲಾಗಿದೆ.

ಇ) ವಿಧಾನ ಸಭಾ ಸದಸ್ಯರು ವಿಧಾನ ಪರಿಷತ್ ಸದಸ್ಯರು, ಲೋಕಸಭಾ ಸದಸ್ಯರುಗಳಉ ಸೂಚಿಸುವ ಕೆಲಸಗಳನ್ನು ತೆಗೆದುಕೊಳ್ಳಬಹುದು.

ಈ) ಗಡಿ ಅಭಿವೃದ್ಧಿ ಕೆಲಸ 1990-91ನೇ ಸಾಲಿನಿಂದ ಪ್ರಾರಂಭವಾಗಿದೆ. ಬೆಳಗಾವಿ ಜಿಲ್ಲೆಗೆ ಇದುವರೆವಿಗೂ ಬಿಡುಗಡೆಯಾದ ಹಣವನ್ನು ಕೆಳಗೆ ಸೂಚಿಸಲಾಗಿದೆ.

(ಲಕ್ಷ ರೂ.ಗಳಲ್ಲಿ)

ತಾಲ್ಲೂಕು	1990-91	1991-92	1992-93	1993-94
ಅಥಣಿ	9.00	25.00	22.116	10.00
ಬೆಳಗಾವಿ	9.00	25.00	22.116	10.00
ಚಿಕ್ಕೋಡಿ	9.00	25.00	22.116	10.00
ಹುಕ್ಕೇರಿ	9.00	25.00	22.116	10.00
ಖಾನಾಪುರ	9.00	25.00	22.116	10.00